

ಪ್ರಕೃತಿ

# ಚಾರ್ಮಾಡಿಯ ಚೆಲುವೆಯರು!



**ದಾರಿಯುದ್ದಕ್ಕೂ ಕಿರುಬೆರಳ ಗಾತ್ರದಿಂದ ನೂರಾರು ಅಡಿಗಳ ಅಗಲ ಮೈದುಂಬಿಕೊಂಡ ಜಲಧಾರೆಗಳನ್ನು ಕಣ್ಣು ದಣಿಯುವವರೆಗೂ ನೋಡಬೇಕೆಂದರೆ ಬಹುಶಃ ಚಾರ್ಮಾಡಿ ಘಾಟಿ ಬಿಟ್ಟರೆ ಬೇರೊಂದು ಸ್ಥಳ ಇಲ್ಲ!**

★ ಚಿತ್ರ- ಬರಹ: ವಿ.ಹರಿನಾಥ ಬಾಬು

ಮಾಯವಾಗಿದ್ದ ಮಳೆ ಮತ್ತೆ ಪ್ರತ್ಯಕ್ಷವಾಗಿದೆ! ಬತ್ತಿ ಹೋಗಿದ್ದ ಹಳ್ಳ ಕೊಳ್ಳ ನದಿ ಕೆರೆಗಳು ಮೈದುಂಬಿ ಹರಿಯತೊಡಗಿವೆ! ಪ್ರಕೃತಿ ಮತ್ತೆ ತನ್ನ ಬಿಂಕ ಬಿನ್ನಾಣ ತೋರತೊಡಗಿದೆ. ನೋಡುವ ಕಣ್ಣುಗಳಿಗೆ ಹಬ್ಬ!

ಕರ್ನಾಟಕದಲ್ಲಿ ಮಳೆಗಾಲ ಬಂತೆಂದರೆ ಮೈದುಂಬಿ ಹರಿವ ನೀರ ತೊರೆಗಳಿಗೆ, ಜುಂಯ್ಯನೆ ಜಾರುವ ಝರಿಗಳಿಗೆ, ಹಾಲನೊರೆಯಂತೆ ಧುಮ್ಮಿಕ್ಕುವ ಜಲಪಾತಗಳಿಗೇನೂ ಕಡಿಮೆಯಿಲ್ಲ. ಆದರೆ ದಾರಿಯುದ್ದಕ್ಕೂ ಕಿರುಬೆರಳ ಗಾತ್ರದಿಂದ ಹಿಡಿದು ನೂರಾರು ಅಡಿಗಳ ಅಗಲ ಮೈದುಂಬಿಕೊಂಡು ಜಾರುವ, ಬೀಳುವ ನೂರಾರು ಜಲಧಾರೆಗಳವರೆಗೆ ಕಣ್ಣು ದಣಿಯುವವರೆಗೂ ನೋಡಬೇಕೆಂದರೆ ಬಹುಶಃ ಚಾರ್ಮಾಡಿ ಘಾಟಿ ಬಿಟ್ಟರೆ ಬೇರೊಂದು ಸ್ಥಳ ಇಲ್ಲ!

ಮೂಡಿಗೆರೆ ದಾಟಿ ಕೊಟ್ಟಿಗೆಹಾರದಲ್ಲಿ ನೀರ್‌ದೋಸೆ ಸವಿದು ಒಂದಷ್ಟು ಬಿಸಿ ಬಿಸಿ ಕಾಫಿ ಹೀರಿ ಮುಂದೆ ಹೋದರೆ ಚಾರ್ಮಾಡಿ ಘಾಟಿ ತನ್ನ ವನಪು ವೈಯ್ಯಾರಗಳನ್ನು ಅಂಕು ಡೊಂಕು ರಸ್ತೆಯುದ್ದಕ್ಕೂ ತೆರೆದಿಡುತ್ತಾಳೆ.

ಕೊಟ್ಟಿಗೆ ಹಾರದಿಂದ ಕೂಗಳತೆಯ ದೂರದಲ್ಲಿ ಅರಣ್ಯ ಇಲಾಖೆಯ ಮಲಯ ಮಾರುತ ಅತಿಥಿ ಗೃಹವಿದೆ. ಸುಂದರವಾದ ಪರಿಸರದಲ್ಲಿ ಸುಂದರ ವಿಶ್ರಾಂತಿ ಗೃಹ. ಚಾರಣಾರ್ಥಿಗಳು ಒಂದು ದಿನವಾದರೂ ಅಲ್ಲಿ ತಂಗಲೇಬೇಕಾದ ದಿವ್ಯತಾಣ. ಮಳೆಯ ಭಾರವ ಹೊತ್ತ ಕರಿ ಮೋಡಗಳು ಮುತ್ತಿಡುತ್ತಾ ಸಾಗುವ ಪರಿಯನ್ನು ಎಷ್ಟು ಬಣ್ಣಿಸಿದರೂ ಸಾಲದು.

ಮಲಯ ಮಾರುತದ ಕಾಲ ಬುಡದಿಂದಲೇ ಶುರುವಾಗುವ ಝರಿಗಳ ನಿನಾದ ಅಣ್ಣಪ್ಪನ ಗುಡಿಯನ್ನು ದಾಟಿ ಮುಂದೆ 3-4 ಕಿ.ಮೀ ವರೆಗೆ ಮುಂದುವರಿಯುತ್ತದೆ. ಹೋಗುವ ಬಲದ ಬದಿಯಲ್ಲಿ ಮುಗಿಲೆತ್ತರ ನಿಂತ ಬೆಟ್ಟಗಳಾದರೆ, ಎಡಬದಿಯಲ್ಲಿ ಸಹ್ಯಾದ್ರಿಯ ಸಕಲ ಚೆಲುವನ್ನೂ ತುಂಬಿ ನರ್ತಿಸುವ ಕಣಿವೆ, ಆಳ ಪ್ರಪಾತ; ದೂರದಲ್ಲಿ ಕಾಣುವ ಜಲಪಾತಗಳು, ಝರಿಗಳು; ಹೊಸ ಚಿಗುರು ತೊಟ್ಟ ಗಿಡ-ಮರಗಳು, ಹೂಬಿಟ್ಟ ಟೊಂಗೆಗಳು, ಕಿವಿಗೆ ಇಂಪಾದ ಗಾನ ಉಣಬಡಿಸುವ ಹೆಸರು ತಿಳಿಯದ ಪಕ್ಷಿಗಳು.

ಎಷ್ಟು ಬಾರಿ ಆ ದಾರಿಯಲ್ಲಿ ಹೋಗಿ ಬಂದರೂ ಚೆಲುವು ಮಾಸುವುದಿಲ್ಲ. ಮಳೆಗಾಲದಲ್ಲಿ ಆ ಹತ್ತು ಕಿ.ಮೀ.ಗಳನ್ನು ನಡೆಯುವುದೆಂದರೆ ಅಕ್ಷರಶಃ ಸ್ವರ್ಗದಲ್ಲಿಯೇ ನಡೆದಾಡಿದ ಅನುಭವ! ಅಲೆಖಾನ್ ಕಾಫಿ ತೋಟದ ಹತ್ತಿರ ಬೀಳುವ ಜಲಪಾತ ಅತ್ಯಂತ ನಯನ ಮನೋಹರ. ಮಳೆಗಾಲವಾದ್ದರಿಂದ ಇಂಬಳಗಳ ಸಹವಾಸ ಇದ್ದದ್ದೇ. ಸ್ವಲ್ಪ ರಸ್ತೆ ದಾಟಿ ನೀರ ಝರಿಯ ಕಡೆ ಕಾಲಿಟ್ಟರೆ ಸಾಕು. ಆಗಾಗ್ಗೆ ಕಾಲುಗಳನ್ನು ಪರಿಶೀಲಿಸಿಕೊಳ್ಳುತ್ತಾ ಇಂಬಳಗಳು ಅಂಟಿಕೊಂಡಿಲ್ಲವೆಂದು ಖಾತ್ರಿಪಡಿಸಿಕೊಳ್ಳುತ್ತಾ ಮುಂದೆ ಸಾಗಬೇಕು! ಹೊಗೆಸೊಪ್ಪು, ಸುಣ್ಣ, ಡೆಟಾಲ್ ಯಾವುದನ್ನಾದರೂ ಕಾಲಿಗೆ ಲೇಪಿಸಿಕೊಂಡರೆ ಒಳಿತು.

ಒಂದಾದ ನಂತರ ಒಂದು, ಮತ್ತೊಂದು, ಮಗದೊಂದು ದಾರಿಯುದ್ದಕ್ಕೂ ನೂರಾರು ಕಿರು ತೊರೆಯ ಜಲಪಾತಗಳು ತಮ್ಮಷ್ಟಕ್ಕೆ ತಾವೇ ಹಾಡಿಕೊಳ್ಳುತ್ತಾ ಸಾಗುತ್ತವೆ. ಹೆಸರಿಲ್ಲದ ಈ ನೂರಾರು ನೀರ ತೊರೆಗಳಿಗೆ ಹೆಸರಿಟ್ಟು ಕೂಗಬೇಕೆನಿಸಿದರೆ ನಿಮ್ಮಿಷ್ಟ! ಕವಿಯಾದರೆ ಕವಿತೆ ಕಟ್ಟಬಹುದು. ನಟನಾದರೆ ಅಭಿನಯಿಸಬಹುದು, ಚಿತ್ರಕಲಾವಿದನಾದರಂತೂ ಹಬ್ಬವೋ ಹಬ್ಬ. ಜಲಧಾರೆಗಳಲ್ಲಿ ಮಿಂದೇಳುವ ಮನಸ್ಸಾದರೆ ಯಾವ ಸಂಕೋಚ ಮುಜುಗರವಿಲ್ಲದೆ, ಯಾವ ಭಯವೂ ಇಲ್ಲದೆ ಮುಳುಗೇಳಬಹುದು.

ಕೊನೇ ಮಾತು: ದಾರಿಯುದ್ದಕ್ಕೂ ಹೋಗಿ ಬರುವ ವಾಹನಗಳ ಬಗ್ಗೆ ಎಚ್ಚರವಿರಲಿ. ಹಾಗೆಯೇ ನಿಮ್ಮೊಂದಿಗೆ ಒಯ್ದ ಪ್ಲಾಸ್ಟಿಕ್ ಮತ್ತಿತರ ವಸ್ತುಗಳನ್ನು ಎಲ್ಲೆಂದರಲ್ಲಿ ಬಿಸಾಡಬೇಡಿ.